**CENTRAL BOARD OF SECONDARY EDUCATION**

**CODE NO: 115**
**CLASS XII KANNADA**
**MODEL QUESTION PAPER**
**TERM – I**

**Max. Marks-40** **Time-90 Minutes**

- Paper will be of three Sections - A, B and section C will have 100% weightage i.e 40 marks
- Section- A, B and C will have all MCQs.
- The pattern of Question paper will have case based/situation based/assertive/Reasoning type MCQs.
- Section- A will have all MCQs. (1X10=10 Marks)
- Section—B will have all MCQs (1X10=10Marks).
- Section-C will have all MCQs ( 1X20=20 Marks).
- Question paper is comprised of 50 MCQs Questions, 40 MCQs need to be attempted.

| **Section – A, B and C: Objective type paper, Class: XII** | | | | |
|---|---|---|---|---|
| Section | Description | Type of Questions | Total Marks | Percentage |
| Section-A (a)Unseen Comprehensive paragraph. (b) seen Comprehensive paragraph. | (a) One unseen paragraph of approximately around 200 words. 6 MCQ will be asked and 5 need to be attempted. 1x 5=5(MCQs)<br><br>(b) One seen paragraph of approximately around 200 words. 6 MCQ will be asked and 5 need to be attempted. 1x 5=5(MCQs) | 1X5<br>1X5 | 5<br>5 | 25% |
| Section-B (Grammar) | 13 MCQs of equal difficult will be asked and 10 need to be attempted. 1x 10=10(MCQs) | 1X10 | 10 | 25% |
| Section-C (Main Course Book) | The MCQs are drawn from Prose & Poetry out of 25 MCQs 20 MCQs will be asked to attempt 1x 20=20(MCQs) | 1X20 | 20 | 50% |

**CENTRAL BOARD OF SECONDARY EDUCATION**

**CODE NO: 115**
**CLASS XII KANNADA**
**MODEL QUESTION PAPER**
**TERM – I**

**ONE PAPER** **TIME: 90 MINUTES** **M.MARKS : 40**

ತರಗತಿ :**12** ಸಿಬಿಎಸ್‌ಇ ವಿಷಯ : ಕನ್ನಡ

ಮಾದರಿ ಪ್ನಶ್ನೆ ಪತ್ರಿಕೆ

ಒಂದು ಪತ್ರಿಕೆ ಸಮಯ : **90** ನಿಮಿಷ ಅಂಕಗಳು : **40**

---

**ಸೂಚನೆಗಳು :**

**1. ಪ್ರಶ್ನೆ ಪತ್ರಿಕೆಯು A, B ಮತ್ತು C ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.**

**2. ಒಟ್ಟು 50 ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ. ಅವುಗಳಲ್ಲಿ ಕೇವಲ 40 ಪ್ರಶ್ನೆಗಳಿಗೆ ಮಾತ್ರ ಉತ್ತರಿಸಬೇಕು.**

**3. ವಿಭಾಗ A ವಾಚನ ಮತ್ತು ಗ್ರಹಿಕಾ ಕೌಶಲ್ಯದಲ್ಲಿ ಎರಡು ಗದ್ಯಾಂಶ ಕೊಡಲಾಗಿದೆ. ಪ್ರತಿ ಗದ್ಯಾಂಶದಲ್ಲಿ 6 ಪ್ರಶ್ನೆಗಳನ್ನು ಕೊಡಲಾಗಿದೆ. 5 ಪ್ರಶ್ನೆಗಳಿಗೆ ಉತ್ತರಿಸಬೇಕು.**

**4. ವಿಭಾಗ B ಅನ್ವಯಿಕ ವ್ಯಾಕರಣ ವಿಭಾಗದಲ್ಲಿ ಕೊಟ್ಟಿರುವ 13 ಪ್ರಶ್ನೆಗಳಲ್ಲಿ 10 ಪ್ರಶ್ನೆಗಳಿಗೆ ಉತ್ತರಿಸಬೇಕು.**

**5. ವಿಭಾಗ C ಗದ್ಯ ಪದ್ಯ ಅಧ್ಯಯನ ವಿಭಾಗದಲ್ಲಿ ಕೊಟ್ಟಿರುವ 25 ಪ್ರಶ್ನೆಗಳಲ್ಲಿ 20 ಪ್ರಶ್ನೆಗಳಿಗೆ ಉತ್ತರಿಸಬೇಕು.**

---

| | | |
|---|---|---|
| **ವಿಭಾಗ- A** | **ವಾಚನ ಮತ್ತು ಗ್ರಹಿಕಾ ಕೌಶಲ್ಯ (ಬಹು ಆಯ್ಕೆ ಪ್ರಶ್ನೆಗಳು)** | **10 ಅಂಕಗಳು** |
| **ವಿಭಾಗ- B** | **ಅನ್ವಯಿಕ ವ್ಯಾಕರಣ (ಬಹು ಆಯ್ಕೆಪ್ರಶ್ನೆಗಳು)** | **10 ಅಂಕಗಳು** |
| **ವಿಭಾಗ- C** | **ಪಠ್ಯಗಳ ಅಧ್ಯಯನ (ಬಹು ಆಯ್ಕೆಪ್ರಶ್ನೆಗಳು)** | **20 ಅಂಕಗಳು** |
| | **ಒಟ್ಟು ಅಂಕಗಳು** | **40 ಅಂಕಗಳು** |

**ವಿಭಾಗ A**

**( ವಾಚನ ಮತ್ತು ಗ್ರಹಿಕಾ ಕೌಶಲ್ಯ ) : 10 ಅಂಕಗಳು**

**I. ಈ ಕೆಳಗೆ ಎರಡು ಗದ್ಯಾಂಶ ಕೊಡಲಾಗಿದೆ. ಪ್ರತಿ ಗದ್ಯಾಂಶ ಕೆಳಗೆ 6 ಪ್ರಶ್ನೆಗಳನ್ನು ಕೊಡಲಾಗಿದ್ದು, ಅವುಗಳಲ್ಲಿ 5 ಪ್ರಶ್ನೆಗಳಿಗೆ ಉತ್ತರಿಸಬೇಕು.**

A. ಹಳ್ಳಿಯು ತನ್ನ ಬಾವಿಗಳ ಲೆಕ್ಕಪತ್ರ ಇಡುವುದನ್ನು ಆರಂಭಿಸಿತು. ವಿಶೇಷವಾಗಿ ಗುರುತಿಸಲ್ಪಟ್ಟ ಆರು ಬಾವಿಗಳಿಂದ ಪ್ರತಿ ತಿಂಗಳು ಪಡೆದ ಅಂಕಿ-ಸಂಖ್ಯೆಯನ್ನು ನಾಲ್ಕು ಮಳೆ ಅಳೆಯುವ ಸಾಧನಗಳೊಂದಿಗೆ ಹೋಲಿಸುತ್ತ, ಅದನ್ನು ಅಲ್ಲಿನ ಜಲಾನಯನ ಪ್ರದೇಶದೊಂದಿಗೆ ಸಂಬಂಧ ಕಲ್ಪಿಸಲಾಯಿತು. ಈ ಪದ್ಧತಿ ಆ ಹಳ್ಳಿಯಲ್ಲಿ ನೀರಿನ ಲೆಕ್ಕ ಪರಿಶೋಧನಾ

ವ್ಯವಸ್ಥೆಯನ್ನು ಆರಂಭಿಸಿತು. ಆ ಹಳ್ಳಿಯು ಸ್ಥಳೀಯ ಅಂತರ್ಜಲ ಸಂಸ್ಥೆಯೊಂದಿಗೆ ಕೈ ಜೋಡಿಸಿ, ನೀರಿನ ಲಭ್ಯತೆಯ ಅಂದಾಜು ಮತ್ತು ಅಲ್ಲಿ ಅನುಸರಿಸಿದ ಬೆಳೆ ಪದ್ಧತಿಯೊಂದಿಗೆ ಅದನ್ನು ಹೋಲಿಸುವ ಕೆಲಸವನ್ನು ಮಾಡಿತು.

ಪ್ರತಿ ವರ್ಷ ಒಂದು ಪ್ರದೇಶದಲ್ಲಿ ಬೆಳೆಯುವ ಪ್ರತಿ ಬೆಳೆಗೆ ಬೇಕಾಗುವ ನೀರಿನ ಅವಶ್ಯಕತೆಯ ಲೆಕ್ಕಾಚಾರ ಮಾಡಲಾಯಿತು. ಉದಾಹರಣೆಗೆ: ಈ ವರ್ಷ ಮಳೆಯು ಕಡಿಮೆಯಾಗಿರುವುದರಿಂದ ಗೋಧಿ ಬೆಳೆಯನ್ನು ಬೆಳೆಯಬಾರದೆಂದು ಗ್ರಾಮಸಭೆಯಲ್ಲಿ ನಿರ್ಧರಿಸಲಾಗಿದೆ. ನಾನು ಆ ಊರಿನ ರೈತರನ್ನು ನಿಮ್ಮ ಹೊಲಗಳಲ್ಲಿ ಗೋಧಿಯನ್ನು ಬೆಳೆಯದಿರಲು ಏಕೆ ಒಪ್ಪಿದಿರಿ? ಎಂದು ಕೇಳಿದಾಗ ಅವರ ಉತ್ತರ ತುಂಬಾ ಸರಳವಾಗಿತ್ತು. ಅವರು ತಮ್ಮ ಬಾವಿಗಳಲ್ಲಿ ಕಡಿಮೆ ನೀರಿರುವುದನ್ನು ನೋಡಬಲ್ಲವರಾಗಿದ್ದರು. ಅಲ್ಲಿ ವಿಜ್ಞಾನ ಮತು ಆಚರಣೆಗಳು ಸೇತುವೆಗಳನ್ನು ಕಟ್ಟಿದ್ದವು.

ಇಂದು ಆ ಹಳ್ಳಿಯು ಒಂದು. ಸರಳವಾದ ನಿಯಮವನ್ನು ಹೊಂದಿದೆ. ಅದೆಂದರೆ: ಒಂದು ವೇಳೆ ನಾಲ್ಕು ಇಂಜಿನಷ್ಟು (ನೂರು ಮಿ.ಮೀ) ಮಳೆಯಾದರೆ, ಅಲ್ಲಿ ಎಲ್ಲರಿಗೂ ಕುಡಿಯಲು ಮತ್ತು ಒಂದು ಬೆಳೆಗೆ ಸಾಕಾಗುವಷ್ಟು ನೀರಿದೆ; ಒಂದು ವೇಳೆ ಎಂಟು ಇಂಚಿನಷ್ಟು (200ಮಿಮೀ) ಮಳೆಯಾದರೆ, ಆ ಹಳ್ಳಿಗೆ ಕುಡಿಯಲು ಸಾಕಾಗುವಷ್ಟುಮತ್ತು ಒಂದು ಪೂರ್ಣ ಬೆಳೆ ಹಾಗೂ ಎರಡು ಅರ್ಧ ಬೆಳೆಗಳನ್ನು (ಅರ್ಧದಷ್ಟು ಭೂಮಿಯಲ್ಲಿ ಬೆಳೆದ ಬೆಳೆ) ಬೆಳೆಯಲು ನೀರು ಲಭ್ಯವಿದೆ; ಒಂದು ವೇಳೆ 12 ಇಂಚಿನಷ್ಟು (300 ಮಿಮೀ) ಅಥವಾ ಅದಕ್ಕಿಂತ ಹೆಚ್ಚು ಮಳೆಯಾದರೆ, ಇಡೀ ಹಳ್ಳಿಗೆ ಸಾಕಾಗುವಷ್ಟು ಕುಡಿಯುವ ನೀರು ಮತ್ತು ಮೂರು ಪೂರ್ಣ ಬೆಳೆಗಳಿಗೆ ಬೇಕಾಗುವ ನೀರಾವರಿ ಲಭ್ಯವಿದೆ. ಇದರರ್ಥ ಸಣ್ಣ ಮಳೆ ಆದರೆ ಖಚಿತ ಫಲ.

ಈಗ ನಮ್ಮ ಮುಂದೆ ಇರುವ ಪ್ರಶ್ನೆಯೆಂದರೆ ಈ ಪದ್ಧತಿಯನ್ನು ಉಳಿದ ಹಳ್ಳಿಗಳು ಅನುಸರಿಸುತ್ತವೆಯೇ ಎಂಬುದು. ಅಭಿವೃದ್ಧಿಯ ಈ ಪ್ರಯೋಗಾಲಯವು ಬೇರೆಯವರಿಗೆ ಕಲಿಸಬಹುದೇ? ಎನ್ನುವುದು ಈಗ ಪ್ರಶ್ನೆಯಾಗಿದೆ.

**ಪ್ರಶ್ನೆಗಳು :**

**1. ಹಳ್ಳಿಯು ಲೆಕ್ಕಪತ್ರ ಇಡುವುದನ್ನು ಹೇಗೆ ಆರಂಭಿಸಿತು?**

1. ಬಾವಿಗಳ ಲೆಕ್ಕಗಳನ್ನು ಇಡುವುದರಿಂದ
2. ಎಲ್ಲ ಮನೆಗಳ ನೀರಿನ ಲೆಕ್ಕ ಇಡುವುದರಿಂದ
3. ಮಳೆ ಅಳೆಯುವ ಳ ಸಾಧನಗಳಿಂದ
4. ಜಲಾನಯನ ಪ್ರದೇಶದಲ್ಲಿನ ನೀರನ್ನು ನೋಡಿಕೊಂಡು.

**2. ಜನರು ಗೋಧಿ ಬೆಳೆಯದಿರಲು ಏಕೆ ಒಪ್ಪಿಕೊಂಡರು?**

1. ಗ್ರಾಮ ಸಭೆಯಲ್ಲಿ ತೀರ್ಮಾನಿಸಿದ್ದರಿಂದ
2. ಯಾವಾಗಲೂ ಒಂದೇ ಬೆಳೆ ಬೆಳೆಯಬಾರದೆಂದು
3. ಆ ವರ್ಷ ಮಳೆ ಕಡಿಮೆಯಾದುದರಿಂದ
4. ತಮ್ಮ ಬಾವಿಗಳಲ್ಲಿ ನೀರು ಇರದುದರಿಂದ.

**3. ಈಗ ನಮ್ಮ ಮುಂದಿರುವ ಪ್ರಶ್ನೆಯೇನು?**

1. ಮಳೆ ಹೆಚ್ಚಿಸಲು ಏನು ಮಾಡಬೇಕು
2. ಯಾವಾಗಲೂ ಬೆಳೆ ಬೆಳೆಯಲು ಏನು ಮಾಡಬೇಕು
3. ನೀರಿನ ನಿರ್ವಹಣೆ ಹೇಗೆ
4. ಆ ಹಳ್ಳಿಯ ಪದ್ಧತಿಯನ್ನು ಉಳಿದ ಹಳ್ಳಿಗಳೂ ಪಾಲಿಸಿತ್ತವೆಯೇ ಎಂಬುದು.

**4. ನೀರು ಕುಡಿಯಲು ಮತ್ತು ಒಂದು ಬೆಳೆ ಬೆಳೆಯಲು ಯಾವಾಗ ಸಾಧ್ಯ?**

1. ನಾಲ್ಕಿಂಚು ಮಳೆಯಾದಾಗ
2. ಹನ್ನೆರಡಿಂಚು ಮಳೆಯಾದಾಗ

3. ಎಂಟಿಂಚು ಮಳೆಯಾದಾಗ
4. ಹತ್ತಿಂಚು ಮಳೆಯಾದಾಗ.

**5. ಎಷ್ಟು ಮಳೆಯಾದಾಗ ಮೂರು ಬೆಳೆ ಬೆಳೆಯಲು ಸಾಧ್ಯ?**

1. ನೂರು ಮಿ.ಮೀ.
2. ಇನ್ನೂರು ಮಿ.ಮೀ.
3. ಮುನ್ನೂರು ಮಿ.ಮೀ.
4. ನೂರೈವತ್ತು ಮಿ.ಮೀ.

**6. ಎರಡು ಅರ್ಧ ಮತ್ತು ಒಂದು ಪೂರ್ಣ ಬೆಳೆ ಬೆಳೆಯಲು ಯಾವಾಗ ಸಾಧ್ಯ?**

1. ನಾಲ್ಕಿಂಚು ಮಳೆಯಾದಾಗ
2. ಹನ್ನೆರಡಿಂಚು ಮಳೆಯಾದಾಗ
3. ಎಂಟಿಂಚು ಮಳೆಯಾದಾಗ
4. ಹತ್ತಿಂಚು ಮಳೆಯಾದಾಗ.

**B. ಕೆಳಗಿನ ಗದ್ಯಾಂಶ ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ. 1*5 =5**

ಯಾವ ಭಾಷೆಯ ಹೇರಿಕೆಯು ಸರಿಯಲ್ಲ.ಯಾವುದೇ ಭಾಷೆಯ ಕಲಿಕೆಯನ್ನು ತಡೆಯುವುದು ಸರಿಯಲ್ಲ. ಆದರೆ ಇದರಲ್ಲಿ ಔಚಿತ್ಯದ ಒಂದು ಪ್ರಶ್ನೆಯಿದೆ. ಒಂದು ಘಟ್ಟದಿಂದ ಮುಂದಕ್ಕೆ ವಿದ್ಯಾರ್ಥಿಗಳು ತಮಗೆ ಬೇಕಾದ ಭಾಷೆಗಳನ್ನು ಆಯ್ದುಕೊಂಡು ಅಭ್ಯಾಸ ಮಾಡುವ ಅವಕಾಶಗಳಿರಬೇಕು. ಆ ಘಟ್ಟದವರೆಗೆ ಮಾತೃಭಾಷೆಯ ಹಾಗೂ ಪ್ರಾದೇಶಿಕ ಭಾಷೆಯ ಕಡ್ಡಾಯ ಶಿಕ್ಷಣ ಕೊಡುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಒಂದು ರಾಜ್ಯದಲ್ಲಿ ನೆಲೆಸಿದವರು ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಕಲಿಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ್ದು. ಇಂದು ಅಂತಹ ಶಿಕ್ಷಣ ಕ್ರಮವನ್ನು ರೂಪಿಸಬೇಕಾಗುತ್ತದೆ. ಸ್ಥಳೀಯ ಭಾಷೆಯನ್ನು ಕಲಿಯದೆ ಹೋದರೆ ಹೊರಗಿನಿಂದ ಬಂದವರು ದ್ವೀಪಗಳಾಗಿ ಉಳಿಯಬೇಕಾಗುತ್ತದೆ. ಆ ರಾಜ್ಯದ ಜನರೊಂದಿಗೆ ಬೆರೆಯಲು ಸಾಧ್ಯವಾಗುವುದಿಲ್ಲ. ಒಂದು ರಾಜ್ಯದ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಂಡು ಬದುಕುವ ಜನ ಅಲ್ಲಿನ ಭಾಷೆಯನ್ನೂ ಬಳಸುವುದು ಅನಿವಾರ್ಯವಾಗುತ್ತದೆ. ಪ್ರದೇಶ ಭಾಷೆಯ ಕಲಿಕೆ ಮಾತೃಭಾಷಾ ಕಲಿಕೆಗೆ ವಿರೋಧವಾದುದಲ್ಲ. ಅವೆರಡು ಪೂರಕವಾದಾಗಲೇ ವಿದ್ಯಾರ್ಥಿಗಳಿಗೆ ತಮ್ಮ ಮನೆ ಮತ್ತು ಆವರಣಗಳ ಪರಿಚಯ ಸ್ಪಷ್ಟವಾಗುತ್ತದೆ. ಇಂಗ್ಲೀಷ್ ನಮಗೆ ಪ್ರಪಂಚಕ್ಕಿರುವ ಕಿಟಿಕಿ ಎಂಬುದರಲ್ಲಿ ಸಂದೇಹವಿಲ್ಲ. ಹಾಗೆಂದು ಅದನ್ನು ತಲೆಯ ಮೇಲೆ ಹೇರಿಕೊಳ್ಳಲಾಗುವುದಿಲ್ಲ. ಇಂಗ್ಲೀಷ್ನ ದುರ್ದೈವವೆಂದರೆ ಅದರ ನಿಜವಾದ ಸಾರ್ಥಕವಾದ ಬಳಕೆಯಾಗದೆ ಅದು ಕೇವಲ ಒಂದು ಪ್ರತಿಷ್ಠೆಯ ವಿಷಯವಾಗಿರುವುದು. ಕಾನ್ವೆಂಟ್ಗಳ ಶಿಕ್ಷಣದಲ್ಲಿ ಅದು ಗಿಳಿ ಪಾಠವಾಗಿ ನಮ್ಮ ಒಂದು ಕೃತಕ ವ್ಯಕ್ತಿತ್ವವನ್ನು ರೂಪಿಸುತ್ತದೆ. ಈ ಬಗೆಯ ಶಿಕ್ಷಣವೇ ಶ್ರೇಷ್ಠವೆಂದು ಅನೇಕರು ಭ್ರಮಿಸಿದ್ದಾರೆ. ಇಂಗ್ಲೀಷ್ ಬೇಕು ನಿಜ. ಆದರೆ ಎಷ್ಟು ಬೇಕು, ಹೇಗೆ ಬೇಕು ಎನ್ನುವುದನ್ನು ಮಾತ್ರ ಯಾರೂ ಯೋಚಿಸಿಲ್ಲ.

**ಪ್ರಶ್ನೆಗಳು**

**7. ಔಚಿತ್ಯದ ಪ್ರಶ್ನೆ ಯಾವುದು?**

1. ಪ್ರಾ ದೇಶಿಕ ಭಾಷೆಯ ಕಡ್ಡಾಯ ಶಿಕ್ಷಣ
2. ಯಾವ ಭಾಷೆಯ ಹೇರಿಕೆಯೂ ಸರಿಯಲ್ಲ.

3. ವಿದ್ಯಾರ್ಥಿಗಳು ತಮಗೆ ಬೇಕಾದ ಭಾಷೆಗಳನ್ನು ಆಯ್ದುಕೊಂಡು ಅಭ್ಯಾಸ ಮಾಡುವ ಅವಕಾಶ.
4. ಯಾವುದೇ ಭಾಷೆಯ ಕಲಿಕೆಯನ್ನು ತಡೆಯುವುದು ಸರಿಯಲ್ಲ.

**8. ಸ್ಥಳೀಯ ಭಾಷೆ ಕಲಿಯದೆ ಹೋದರೆ ಏನಾಗುತ್ತದೆ?**

1. ಜನರೊಂದಿಗೆ ಬೆರೆಯಲು ಸಾಧ್ಯವಾಗುವುದಿಲ್ಲ.
2. ಹೊರಗಿನಿಂದ ಬಂದವರು ದ್ವೀಪಗಳಾಗಿ ಉಳಿಯಬೇಕಾಗುತ್ತದೆ.
3. ಪರಭಾಷೆಯ ಮೇಲಿನ ವ್ಯಾಮೋಹ ಹೆಚ್ಚಾಗುತ್ತದೆ.
4. ಮಾತೃಭಾಷಾ ಕಲಿಕೆ ಸಾಧ್ಯವಾಗುವುದಿಲ್ಲ.

**9. ಪೂರಕವಾಗಿರಬೇಕಾದ ಅಂಶಗಳು ಯಾವುವು?**

1. ಕೇಂದ್ರಕ್ಕೆ ರಾಜ್ಯ.
2. ರಾಜ್ಯಭಾಷೆ ಮತ್ತು ರಾಷ್ಟ್ರ ಭಾಷೆ.
3. ಕನ್ನಡಕ್ಕೆ ಇಂಗೀಷ್ ಭಾಷೆ.
4. ಪ್ರದೇಶ ಭಾಷೆಯ ಮತ್ತು ಮಾತೃಭಾಷೆಯ ಕಲಿಕೆ

**10. ಇಂಗ್ಲೀಷ್ ಶಿಕ್ಷಣ ಎಂತಹ ವ್ಯಕ್ತಿತ್ವ ಬೆಳೆಸುತ್ತದೆ?**

1. ಉತ್ತಮ ವ್ಯಕ್ತಿತ್ವ
2. ಕೃತಕ ವ್ಯಕ್ತಿತ್ವ
3. ಮೃದು ವ್ಯಕ್ತಿತ್ವ
4. ಸರಳ ವ್ಯಕ್ತಿತ್ವ

**11. ಇಂಗ್ಲೀಷ್ನ ದುರ್ದೈವವೇನು?**

1. ಅದರ ನಿಜವಾದ ಸಾರ್ಥಕವಾದ ಬಳಕೆಯಾಗಿಲ್ಲ.
2. ಇಂಗೀಷ್ ನಮಗೆ ಪ್ರಪಂಚಕ್ಕಿರುವ ಕಿಟಿಕಿ.
3. ಅದು ಕೇವಲ ಒಂದು ಪ್ರತಿಷ್ಠೆಯ ವಿಷಯವಾಗಿರುವುದು.
4. ಇಂಗ್ಲೀಷ ಶಿಕ್ಷಣವೇ ಶ್ರೇಷ್ಠವೆಂದು ಅನೇಕರು ಭ್ರಮಿಸಿದ್ದಾರೆ.

**12. ಕೆಳಗಿನ ಹೇಳಿಕೆಗಳನ್ನು ಗಮನಿಸಿ, ಸರಿಯಾದ ಗುಂಪು ಆರಿಸಿ.**

ಅ. ಯಾವ ಭಾಷೆಯ ಹೇರಿಕೆಯೂ ಸರಿಯಲ್ಲ.

ಬ. ಯಾವುದೇ ಭಾಷೆಯ ಕಲಿಕೆಯನ್ನು ತಡೆಯುವುದು ಸರಿಯಲ್ಲ.

ಕ. ಆದರೆ ಇದರಲ್ಲಿ ಔಚಿತ್ಯದ ಒಂದು ಪ್ರಶ್ನೆಯಿದೆ.

ಗುಂಪು :

1. ಅ ಮತ್ತು ಬ
2. ಅ ಮತ್ತು ಕ

3. ಬ ಮತ್ತು ಕ

4. ಅ, ಬ ಮತ್ತು ಕ

**ವಿಭಾಗ – ಬB**

**ಅನ್ವಯಿಕ ವ್ಯಾಕರಣ ( ಬಹು ಅಯ್ಕೆಯ ಪ್ರಶ್ನೆಗಳು) : 10 ಅಂಕಗಳು**

**II. ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ.ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.(10ಕ್ಕೆ ಮಾತ್ರ). 1* 10 = 10**

13. ರಾಮನ ದೆಸೆಯಿಂದ – ಇಲ್ಲಿರುವ ವಿಭಕ್ತಿಯನ್ನು ಗುರುತಿಸಿ ಬರೆಯಿರಿ.

1. ಪಂಚಮಿ ವಿಭಕ್ತಿ
2. ದ್ವಿತೀಯಾ ವಿಭಕ್ತಿ
3. ತೃತೀಯಾ ವಿಭಕ್ತಿ
4. ಸಪ್ತಮಿ ವಿಭಕ್ತಿ

14. ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದದ ಧಾತುವನ್ನು ತಿಳಿಸಿ.

ಶರಣ ದುಡಿದು ಉಣ್ಣಬೇಕೆಂಬುದು ಬಸವಣ್ಣನವರ ತತ್ವವಾಗಿದೆ.

1. ಶರಣ, ಬಸವಣ್ಣ.
2. ತತ್ವ, ಶರಣ
3. ದುಡಿ ,ಉಣ್ಣು
4. ದುಡಿದು, ಉಣ್ಣಬೇಕು

15. ಜೋಗಿ – ಈ ಪದದ ತತ್ಸಮ ರೂಪ ಬರೆಯಿರಿ.

1. ಭೋಗಿ
2. ತ್ಯಾಗಿ
3. ಸನ್ಯಾಸಿ
4. ಯೋಗಿ

16. ಧರೆ – ಈ ಪದದ ಸಮಾನಾರ್ಥಕ ಪದಗಳನ್ನು ಬರೆಯಿರಿ.

1. ನೆಲ, ಜಲ
2. ಪೊಡವಿ, ಅಡವಿ
3. ಆಗಸ, ಗಗನ
4. ಭೂಮಿ, ಪೃಥ್ವಿ

17. ಶುದ್ಧನೇನಪ್ಪನೇ – ಈ ಪದವನ್ನು ಬಿಡಿಸಿ ಬರೆದಾಗ ಸಿಗುವ ರೂಪವಿದು.

1. ಶುದ್ಧ+ ಅಪ್ಪನೇ
2. ಶುದ್ಧನ್ +ಏನ್ + ಅಪ್ಪನೇ
3. ಶುದ್ಧನ್ + ಅಪ್ಪನೇ
4. ಶುದ್ಧನು + ಅಪ್ಪನೇ

18. ____________ ಇದು ಯಣ್ ಸಂಧಿಗೆ ಉದಾಹರಣೆ.

1. ಕೈಯಲ್ಲಿ
2. ಮನೆಯನ್ನು
3. ಜೀವನವನ್ನು
4. ಅತ್ಯಂತ

19. ಚಂಪಕಮಾಲೆ ವೃತ್ತದಲ್ಲಿ ಇರುವ ಅಕ್ಷರಗಳ ಸಂಖ್ಯೆ

1. 21 ಅಕ್ಷರಗಳು.
2. 23 ಅಕ್ಷರಗಳು
3. 29 ಅಕ್ಷರಗಳು
4. 28 ಅಕ್ಷರಗಳು

20. ಹೆಮ್ಮರ – ಎನ್ನುವ ಪದ ಈ ಸಮಾಸಕ್ಕೆ ಉದಾಹರಣೆ

1. ದ್ವಿಗು ಸಮಾಸಕ್ಕೆ
2. ತತ್ಪುರುಷ ಸಮಾಸ
3. ಕರ್ಮಧಾರಯ ಸಮಾಸ
4. ಅಂಶಿ ಸಮಾಸ

21. **ಕೆಳಗಿನ ಹೇಳಿಕೆಗಳನ್ನು ಗಮನಿಸಿ, ಸರಿಯಾದ ಗುಂಪು ಆರಿಸಿ.**

ಅ. ಹೃಸ್ವ ಸ್ವರಗಳು ಮತ್ತು ಹೃಸ್ವಸ್ವರಸಹಿತ ವ್ಯಂಜನಾಕ್ಷರಗಳು ಲಘು( ) ಆಗುತ್ತವೆ.

ಬ. ವ್ಯಂಜನಾಕ್ಷರದ ಹಿಂದಿನ ಅಕ್ಷರ ಗುರು (-) ಆಗುತ್ತದೆ.

ಗುಂಪು :

1. ಅ ಮಾತ್ರ ಸರಿ
2. ಅ ಮತ್ತು ಬ ಎರಡು ತಪ್ಪು
3. ಬ ಮಾತ್ರ ತಪ್ಪು
4. ಅ ಮತ್ತು ಬ ಎರಡು ಸರಿ

22. **ಕೆಳಗಿನ ಹೇಳಿಕೆಗಳನ್ನು ಗಮನಿಸಿ, ಸರಿಯಾದ ಗುಂಪು ಆರಿಸಿ.**

ಅ. ತ್ರಿಪದಿ ಅಂದರೆ ಮೂರು ಸಾಲಿನ ಪದ್ಯ.

ಬ. ಜನಪದರು ತ್ರಿಪದಿಗಳನ್ನು ರಚಿಸಿದ್ದಾರೆ.

ಕ. ಸರ್ವಜ್ಞನ ತ್ರಿಪದಿಗಳು ಪ್ರಸಿದ್ಧವಾಗಿವೆ.

ಗುಂಪು :

1. ಅ ಮತ್ತು ಬ ಸರಿ
2. ಅ ಮತ್ತು ಕ ಸರಿ
3. ಬ ಮತ್ತು ಕ ಸರಿ
4. ಅ,ಬ ಮತ್ತು ಕ ಸರಿ

23. ರಾಮನಂ – ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ

1. ನಂ
2. ಅಂ
3. ಅನ
4. ಅನ್

24.ಹೋಗಾಗ – ಇದರ ಗ್ರಾಂಥಿಕ ರೂಪ

1. ಹೋದಾಗ
2. ಹೋದಮೇಲೆ
3. ಹೋಗುವಾಗ
4. ಹೋದ

25. ಖಿಲ – ಇದರ ವಿರುದ್ಧಾರ್ಥಕ ಪದ

1. ಅಕಂಡ
2. ಅಖಿಲ
3. ಅಗಾಧ
4. ಅಧಿಕ

**ವಿಭಾಗ – C**

**ಪಠ್ಯಗಳ ಅಧ್ಯಯನ (ಬಹು ಆಯ್ಕೆ ಪ್ರಶ್ನೆ) : 20 ಅಂಕಗಳು**

**III. ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ.ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.(20ಕ್ಕೆ ಮಾತ್ರ). 1 * 20 = 20**

**26.** ಬಸವಣ್ಣನವರ ವಚನಗಳ ಅಂಕಿತ____________

1. ಗುಹೇಶ್ವರ
2. ಚನ್ನಮಲ್ಲಿಕಾರ್ಜುನ

3.ಕೂಡಲಸಂಗಮದೇವ

4. ರಾಮನಾಥ

**27. ಕೆಳಗಿನ ಹೇಳಿಕೆಗಳನ್ನು ಗಮನಿಸಿ, ಸರಿಯಾದ ಗುಂಪು ಆರಿಸಿ.**

ಶಿವಪಥವನ್ನರಿಯದವನನ್ನು ಹೇಗೆ ವಿಡಂಬಿಸಲಾಗಿದೆ?

ಅ. ಅರ್ಥರೇಖೆಯಿದ್ದು ಆಯುಷ್ಯರೇಖೆಯಿಲ್ಲದಿದ್ದರೆ ಪ್ರಯೋಜನವಿಲ್ಲ.

ಬ. ಹೇಡಿಯ ಕೈಯಲ್ಲಿ ಚಂದಾಯುಧವಿದ್ದರೂ ಪ್ರಯೋಜನವಿಲ್ಲ.

ಕ. ಮಂಗನ ಕೈಯಲ್ಲಿ ಹಣವಿದ್ದರೆ ಅದರ ಬೆಲೆ ತಿಳಿಯುವುದಿಲ್ಲ.

ಗುಂಪು :

1. ಅ ಮತ್ತು ಕ ತಪ್ಪು
2. ಬ ಮತ್ತು ಕ ತಪ್ಪು
3. ಅ ಮತ್ತು ಬ ಸರಿ
4. ಅ ಸರಿ

**28. ತಂದೆ ತಾಯಿಗಳಿಗೆ ಮುಪ್ಪಿನಲ್ಲಿ ಒದಗದ ಮಗ __________**

1. ನಿಷ್ಪ್ರಯೋಜಕ
2. ಶತ್ರು
3. ನಿರುಪದ್ರವಿ
4. ವೈರಿ

**29. ನೆರೆಮನೆಯವರು ಎಂತಹವರಿರಬೇಕು?**

1. ದೊಡ್ಡವರಾಗಿರಬೇಕು.
2. ಬುದ್ಧಿವಂತರಾಗಿರಬೇಕು
3. ಶ್ರೀಮಂತರಾಗಿರಬೇಕು
4. ಒಳ್ಳೆಯವರಾಗಿರಬೇಕು

**30. ಮುದುಕ ಇರುವುದು ದೂರದ ಆಸ್ಸಾಂನಲ್ಲಿರುವ ___________ಮಗನ ಮನೆಯಲ್ಲಿ.**

1. ಹಿರಿಯ
2. ನಡುವಿನ
3. ಕಿರಿಯ
4. ತಮ್ಮನ

**31. 'ಏನ್ ಮಾಡೋಕಾಗುತ್ತೆ ಎಲ್ಲಾ ಹಣೆ ಬರಹ ಆಗೋದು ಆಗೇ ಆಗುತ್ತೆ' ಎಂದಾಗೆಲ್ಲ ಲೇಖಕಿಗೆ __________**

1. ಖುಷಿಯಾಗುತ್ತಿತ್ತು.

2. ಆನಂದವಾಗುತ್ತಿತ್ತು.

3. ರೇಗಿ ಹೋಗುತ್ತಿತ್ತು..

4. ನಿರಾಶೆಯಾಗುತ್ತಿತ್ತು.

**32. ಎ.ಆರ್.ಕೃಷ್ಣಶಾಸ್ತ್ರಿಗಳು ಎಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು?**

1. ಬೆಂಗಳೂರಿನಲ್ಲಿ.

2. ಹೈದರಾಬಾದಿನಲ್ಲಿ.

3. ಮುಂಬೈನಲ್ಲಿ.

4. ಧಾರವಾಡದಲ್ಲಿ.

**33. ಅಬ್ದುಲ್ ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ** ________________

1. ಆಶಾವಾದಿ

2. ವಿಚಾರವಾದಿ

3. ಆಶಾಜೀವಿ

4. ಶ್ರಮಜೀವಿ

**34. ಹೆಣ್ಣು ಮಕ್ಕಳ ದು:ಖ  ಬಲ್ಲವರಾರು?**

1. ತಂದೆ

2. ಗೆಳತಿ

3. ತಾಯಿ

4. ಸಹೋದರಿ

**35. ಕಲಾಂ ಅವರ ಕ್ರಿಯಾಶೀಲತೆಗೆ ಸಾಕ್ಷಿ ಯಾವುದು?**

1. ಕ್ಷಿಪಣಿ ತಯಾರಿಕೆ

2. ಕ್ಷಿಪಣಿ ಉಡಾವಣೆ

3. ಸಂಶೋಧನಾ ಕೇಂದ್ರ ಇಮಾರತ್

4. ರಾಷ್ಟ್ರಪತಿಯಾದುದು

**36. ಸೂರ್ಯನಿಲ್ಲದೆ ______________ಅಯ್ಯಾ?**

1. ಬೆಳಕುಂಟೆ.

2. ಹಗಲುಂಟೆ

3. ಬಿಸಿಲುಂಟೆ

4. ಶಾಖವುಂಟೆ

**37. 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಪಾಠವನ್ನು ______________ಕೃತಿಯಿಂದ ಆರಿಸಲಾಗಿದೆ.**

1. ಬದುಕು ಬದಲಿಸಬಹುದು

2. ಒಂದು ಕನಸಿನ ಪಯಣ

3. ಮಹಿಳಾ ಲೋಕ

4. ಮತ್ತೆ ಬರೆದ ಕತೆಗಳು

**38. 'ಒಂದು ಹೂ ಹೆಚ್ಚಿಗೆ ಇಡುತೀನಿ' – ಪದ್ಯ ಬರೆದವರು.**

1. ಸುಕನ್ಯಾ ಮಾರುತಿ

2. ಲಲಿತಾ ಸಿದ್ಧಬಸವಯ್ಯ

3. ದ.ರಾ.ಬೇಂದ್ರೆ

4. ಜಿ.ಎಸ್.ಶಿವರುದ್ರಪ್ಪ.

**39. ಕಲಾಂ ಅವರನ್ನು ಶಾಲೆಗೆ ಕಳಿಸುವಂತೆ ಪ್ರೇರೇಪಿಸಿದವರು__________________**

1. ಕಲಾಂರ ಸಹೋದರ

2. ಶಿವಸುಬ್ರಮಣ್ಯ ಅಯ್ಯರ್

3. ಅವರ ಗುರುಗಳು

4. ಶಿವಸುಬ್ರಮಣ್ಯ ಅಯ್ಯಂಗಾರ

**40. ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ಯಾರು ನೆನಪಾಗುತ್ತಾರೆ?**

1. ಬಾಲ್ಯದ ಗೆಳತಿ ಗೀತಾ

2. ಬಾಲ್ಯದ ಗೆಳತಿ ಸೀತಾ

3. ಸಹೋದರಿ ಅನಿತ

4. ಅಣ್ಣ

**41. ಹಲವು ಹಳ್ಳಗಳು ಸೇರಿ ಏನಾಗುತ್ತವೆ?**

1. ನದಿ

2. ಸರೋವರ

3. ಸಮುದ್ರ

4. ಕೆರೆ

**42. ಲೇಖಕಿಯ ಪತಿಯನ್ನು ಸೋನೋಗ್ರಫಿ ರೂಮಿಗೆ ಕರೆದೊಯ್ದುದೇಕೆ?**

1. ಮೂತ್ರಪಿಂಡದ ಗಾತ್ರ ತಿಳಿಯಲು

2. ಹೃದಯ ತಪಾಸಣೆಗೆ

3. ಚಿಕಿತ್ಸೆಗೆ

4. ಮೂತ್ರಪಿಂಡದಲ್ಲಿನ ಕಲ್ಲು ಪತ್ತೆ ಹಚ್ಚಲು.

**43. ವಿಜ್ಞಾನದ ಅಡಿಪಾಯ ಯಾವುದು?**

1. ಚಿಂತನ

2. ಪ್ರಶ್ನೆ ಕೇಳುವುದು

3. ಮನನ

4. ಪ್ರಯೋಗ ಮಾಡುವುದು.

**44. ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು?**

1. ನಿಶಾ ಶರ್ಮ

2. ದಿಶಾ ಶರ್ಮ

3. ಇಶಾ ಶರ್ಮ

4. ಆಶಾ ಶರ್ಮ

**45. ಕಲಾಂ ಅವರು ಯಾವ ವಿಶ್ವ ವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು?**

1. ಉಸ್ಮಾನಿಯ

2. ಕರ್ನಾಟಕ

3. ಅಣ್ಣಾಮಲೈ

4. ದೆಹಲಿ

**46. ಬ್ಯಾಸಗಿ ದಿವಸಕ್ಕ ಯಾವ ಮರ ತಂಪು?**

1. ಆಲದ ಮರ

2. ಹುಣಸೆಮರ

3. ಹೊಂಗೆಮರ

4. ಬೇವಿನಮರ

**47. ಕೆಳಗಿನ ಹೇಳಿಕೆಗಳನ್ನು ಗಮನಿಸಿ, ಸರಿಯಾದ ಗುಂಪು ಆರಿಸಿ.**

ಕಮಲಾ ಮೇಡಮ್ ವೈದ್ಯರ ಯಾವ ಸಲಹೆಗಳನ್ನು ರೂಢಿಸಿಕೊಂಡರು?

1. ಯಥೇಚ್ಛವಾಗಿ ನೀರು ಕುಡಿಯುವ ಅಭ್ಯಾಸ ಮಾಡಿಕೊಂಡರು.
2. ವಿಶ್ರಾಂತಿ ಪಡೆವ ಅಭ್ಯಾಸ ರೂಢಿಸಿಕೊಂಡರು.
3. ಕೆಲವು ಆಹಾರದ ಬದಲಾವಣೆಗಳನ್ನು ಜಾರಿಗೆ ತಂದರು.

ಗುಂಪು :

1. 1 ಮತು 3 ಸರಿ
2. 2 ತಪ್ಪು ಮತ್ತು 3 ಸರಿ
3. 3 ಮತ್ತು 2ತಪ್ಪು
4. ಮೂರು ತಪ್ಪು

**48. " ಮಿ. ಪ್ರೆಸಿಡೆಂಟ್ ,ನಿಮ್ಮ ಯಶಸ್ಸಿನ ಗುಟ್ಟೇನು" ಎಂದು ಕಲಾಂರನ್ನು ಕೇಳಿದವರಾರು?**

1. ಪತ್ರಕರ್ತರು
2. ಹಿರಿಯ ವಿದ್ಯಾರ್ಥಿಗಳು
3. ಮಕ್ಕಳು
4. ಕಲಾವಿದರು

**49. ವಿ.ಜೆ.ಸುಂದರಮ್ ಅವರು ಹೈದರಾಬಾದಿನ ರಕ್ಷಣಾ ಇಲಾಖೆಯಲ್ಲಿ ________ಆಗಿದ್ದರು.**

1. ಅಧ್ಯಕ್ಷರು
2. ನಿರ್ದೇಶಕರು
3. ಮಾರ್ಗದರ್ಶಕರು
4. ಕಾರ್ಯದರ್ಶಿ

**50. ಮುದುಕಿ ______________ ಹರಕೆ ಹೊತ್ತಳು.**

1. ಗುಟ್ಟೆ ಮಲ್ಲಪ್ಪನಿಗೆ
2. ಮಲ್ಲಪ್ಪನಿಗೆ
3. ಉಳವಿ ಬಸಪ್ಪನಿಗೆ
4. ಅನ್ನಪೂರ್ಣೆಗೆ

**********************